"ಛೆ ಛೆ! ಇದು ಸೇವಾ ಅಂತ ಮಾಡೂದು. ಪಡದಪ್ಪ ಕೈ ಮ್ಯಾಲ ಕೈ ಹಾಕಿಸಿಕೊಂಡಾನು ರೊಕ್ಕ ರೂಪೈ ತಗೋಬಾರದಂತ. ಒಂದು ವ್ಯಾಳೆ ತುಗೊಂಡ್ರೆ ಅಗಸುದ್ದೆ ನಾಟೂದಿಲ್ಲ" ಎಂದಳು.

★★★

ಗುರಬಸಪ್ಪಜ್ಜ ಪಕ್ಕಾ ದೈವ ಭಕ್ತ, ದೇವರು ದಿಂಡಿರ ಮೇಲೆ ಅಚಲ ನಿಷ್ಠೆ, ನಂಬುಗೆ. ಮೂರು ಮಕ್ಕಳ ತಂದೆ. ಚೊಚ್ಚಿಲು ಮರಚಿಲು ಇಬ್ಬರು ಗಂಡು ಮಕ್ಕಳು. ನಂತರ ಹುಟ್ಟಿದ ಹೆಣ್ಣು ಮಗಳೆ ದಾನಮ್ಮ. ಗಂಡು ಮಕ್ಕಳು ತಾಯಿಯಂತೆ ತೆಳ್ಳಗೆ, ಬೆಳ್ಳಗೆ, ನಾಜೂಕಾಗಿದ್ದರು. ದಾನಮ್ಮಳದು ತಂದೆಯ ಹೋಲಿಕೆ, ಅವನ ಬಾಯಲ್ಲಿ ಬಿಚ್ಚಿ ಬಿದ್ದಿದ್ದಳು. ಅವನಂತೆ ದಡೂತಿ ದೇಹ, ಕಪ್ಪು ಬಣ್ಣ, ಮೂಗು ಸ್ವಲ್ಪ ಮೊಂಡ, ದಪ್ಪ ಹುಬ್ಬು, ದಟ್ಟ ಕೂದಲು. ನೋಡಿದರೆ ಗಂಡು ಹುಡುಗನಂತೆ ಕಾಣುತ್ತಿದ್ದಳು. ಎರಡೂ ಗಂಡುಗಳು ಹೆಣ್ಣಾಗಿ ಇವಳು ಗಂಡಾಗಿದ್ದರೆ ಗುರಬಸಪ್ಪನ ನಸೀಬು ತೆರೆಯುತ್ತಿತ್ತು ಅಂತಿದ್ದರು ಊರ ಜನ. ಇದರ ಜೊತೆಗೆ ಅವಳು ಬೆಳೆದು ದೊಡ್ಡವಳಾದಂತೆ ಗದ್ದದ ಮೇಲೆ ಹೋತಿನಂತೆ ಕುರುಚಲು ದಾಡಿ ಕೂಡ ಬೆಳೆಯತೊಡಗಿದವು.

ಗಾಬರಿಗೊಂಡ ತಂದೆತಾಯಿಯರು ದೇವರಿಗೆ ಹರಕೆ ಹೊತ್ತರು. ಗಾಂವಟಿ ಡಾಕ್ಟರಿಗೆ, ಕೂದಲ ಸ್ಪೆಷಲಿಸ್ಟರಿಗೆ ತೋರಿಸಿದರೂ ಏನು ಉಪಯೋಗ ಆಗಲಿಲ್ಲ. ಅವಳು ಬೆಳೆದಂತೆ ಅವೂ ಸಹ ಬೆಳೆಯತೊಡಗಿದವು. ಮುಜಗುರಕ್ಕೊಳಗಾಗಿ ದಾನಮ್ಮ ಮನೆ ಬಿಟ್ಟು ಹೊರಗೆ ಬರುವುದನ್ನೇ ಬಿಟ್ಟಳು.

ಏನಾದ್ರೂ ಯಾಕಾಗಲಿ, ಮಗಳನ್ನು ಒಳ್ಳೆಯ ಮನೆತನಕ್ಕೆ ಕೊಟ್ಟು ಮದುವೆ ಮಾಡಿಕೊಡಬೇಕು ಎಂದುಕೊಂಡನು ಗುರಬಸಪ್ಪಜ್ಜ. ದಾಡಿ ನೋಡಿದ ಕೂಡ್ಲೆ ಹುಡುಗರು ಬಿಡ್ರಿ ಅವರ ತಂದೆತಾಯಿಯರೆ ಒಪ್ಪುತ್ತಿರಲಿಲ್ಲ. ರಗಡ ವರದಕ್ಷಿಣೆ, ಬೆಳ್ಳಿ ಬಂಗಾರು ಕೊಡುತ್ತೇನೆಂದ; ಕಡೀಕ ಅವಳ ಹೆಸರಿಲೆ ಕೂರಿಗೆ ಹೊಲ ಹಚ್ಚತೇನಂದರೂ ಯಾರೂ ಮದುವೆಗೆ ಮುಂದೆ ಬರಲಿಲ್ಲ. ಹೀಗೆ ಹದಿನೈದಿಪ್ಪತ್ತು ಹುಡುಗರು ತಿರಸ್ಕರಿಸಿದಾಗ ಸ್ವತಃ ದಾನಮ್ಮಳೆ ಅಪ್ಪನಿಗೆ, "ನನ್ನ ಲಗ್ನದ ಇಚಾರ ಮನಸ್ಸಿನಿಂದ ತೆಗೆದು ಹಾಕು. ನಾನು ಗಂಡ ಮಗನ್ಹಾಂಗ ಮನ್ಯಾಗಿರತೇನಿ, ಅಣ್ಣಗೋಳಿಗೆ ಛೊಲೊ ಮನತನದಾಗ ಕನ್ಯಾ ನೋಡಿ ಮದುವಿ ಮಾಡೂಣು" ಎಂದು ಖಂಡತುಂಡಾಗಿ ಹೇಳಿದಳು. ಮನಸ್ಸಿನಲ್ಲಿ ಮರುಗಿದರೂ ಗುರಬಸಪ್ಪಜ್ಜ ಸುಮ್ಮನಾಗಲೇಬೇಕಾಯಿತು. ಗದ್ದದ ಮೇಲಿನ ದಾಡಿಯಿಂದಾಗಿ ಅವಳಿಗೆ ಊರಲ್ಲಿ ದಾಡಿ ದಾನಮ್ಮನೆಂಬ ಹೆಸರು ಸ್ಥಾಪಿತವಾಯಿತು.

ದಾನಮ್ಮಳ ಲಗ್ನದ ಇಚಾರ ಬಿಟ್ಟ ಮೇಲೆ ಗುರಬಸಪ್ಪಜ್ಜ ಇಬ್ಬರೂ ಗಂಡು ಮಕ್ಕಳ ಲಗ್ನ ಮಾಡಿ ಸೊಸೆಯಂದಿರನ್ನು ಮನೆ ತುಂಬಿಸಿಕೊಂಡರೂ ಮಗಳ ಲಗ್ನ ಮಾಡಲಿಲ್ಲ ಅನ್ನೂ ಚಿಂತಿ ಮನಸ್ಸಿನ್ಯಾಗ ಕಟೀತಿತ್ತು.

ಇತ್ತ ದಾನಮ್ಮಳ ಬದುಕಿನ ರೀತಿನೇ ಸಂಪೂರ್ಣ ಬದಲಾಯಿತು. ಕೋಳಿ ಕೂಗುದಕ್ಕಿಂತ ಮುಂಚೆ ಎದ್ದು ಸ್ನಾನ ಮಾಡಿ ದೇವರ ಕೋಣೆಯಲ್ಲಿ ಲಿಂಗಪೂಜಾದಲ್ಲಿ ಮುಳುಗಿ ಬಿಡುವಳು. ಹಣೆ, ಕೊರಳು, ಮೈಮೇಲೆ ದಪ್ಪಗೆ ಈಬತ್ತಿ ಹಚ್ಚಿಕೊಂಡು ಅಂಗೈಯಲ್ಲಿಯ ಲಿಂಗದ ಮೇಲೆ ದೃಷ್ಟಿ ಇಟ್ಟು ಕುಳಿತಳೆಂದರೆ ತೀರಿತು, ಬಾಹ್ಯ ಜಗತ್ತಿನ ಪರಿವೆಯೆ ಇರುತ್ತಿರಲಿಲ್ಲ. ಪಣತೆಯ ದೀಪದ ಬೆಳಕು ಮುಖದ ಮೇಲೆ ಪ್ರಶಾಂತವಾಗಿ ಸುಳಿಯುತ್ತಿದ್ದಾಗ ನೋಡಿದರೆ ಕದಳಿವನದ ಅಕ್ಕ, ಗುಡ್ಡಾಪುರದ ದಾನಮ್ಮರನ್ನು ನೋಡಿದಂತಾಗುತಿತ್ತು.

ಎಮ್ಮೆ ಹಿಂಡಿ ಒಂದು ವಾಟಿ ಹಾಲು ಬಿಸಿ ಮಾಡಿಕೊಂಡು ಅದರಲ್ಲಿ ಒಂದು ಕರಣೆ ಬೆಲ್ಲ ಜಜ್ಜಿ ಹಾಕಿ ಕಲೆಸಿ, ಅವ್ವ ಬಡಿದು ಕೆರಸಿಯಲ್ಲಿ ಹಾಕುತ್ತಿದ್ದ ರೊಟ್ಟಿಯಲ್ಲಿ ಎರಡು ಬಿಸಿ ರೊಟ್ಟಿ, ಮ್ಯಾಲೊಂದು ಹುಟ್ಟು ಪಲ್ಲೆ ತಾಟಿನ್ಯಾಗ ಹಾಕಿಕೊಂಡು, ಎರಡು ಊದಿನ ಕಡ್ಡಿ ಹಚ್ಚಿಕೊಂಡು